


## ಲ್ಯಾಕ್ಮೆಯಿಂದ ಐದು ವರ್ಣಗಳ ಕಾಡಿಗೆ

ಲ್ಯಾಕ್ಮೆ ಇದೀಗ ಐದು ವರ್ಣಗಳ ಕಣ್ಣನ ಸೆಳೆಯುವ ಹೊಸ 'ಲ್ಯಾಕ್ಮೆ ಐಕಾನಿಕ್ ವೈಟ್' ಕಾಡಿಗೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಮಹಿಳೆಯರ ಅಂದದ ನೇತ್ರಗಳನ್ನು ಇನ್ನಷ್ಟು ಚೆಂದವಾಗಿಸಲು ಬಿಳಿಯ ಬಣ್ಣದ ಕಾಡಿಗೆಯಿಂದಲೂ ಸಾಧ್ಯ ಎಂಬುದನ್ನು ಈ ಕಾಡಿಗೆ ಎತ್ತಿ ತೋರಿದೆ. ಅದು ಕಣ್ಣಿಗೆ ಅಲಂಕಾರದ ಸಾಂಪ್ರದಾಯಿಕ ವಿಧಾನವನ್ನೇ ಬದಲಿಸಿಬಿಟ್ಟಿದೆ ಎಂದು ವಿಶ್ಲೇಷಿಸುತ್ತದೆ ಕಂಪೆನಿ.

ಬಿಳಿ ಬಣ್ಣದ್ದಷ್ಟೇ ಅಲ್ಲ, ಕಂದು, ನೀಲಿ, ಕಪ್ಪು ಮತ್ತು ಹಸಿರು ಬಣ್ಣದ ಕಾಡಿಗೆಗಳು ಇದರಲ್ಲಿ ಸೇರಿವೆ.

ಇದು ಒಮ್ಮೆ ಕಣ್ಣಿಗೆ ಅಲಂಕರಿಸಿದರೆ 10 ಗಂಟೆಗಳಷ್ಟು ದೀರ್ಘ ಅವಧಿಯವರೆಗೂ ಕಣ್ಣಿನ ಅಂದವನ್ನು ಹೆಚ್ಚಿಸುತ್ತದೆ. ಅಲ್ಲದೆ ಇದು ಜಲ ನಿರೋಧಕವಾಗಿದೆ. ಹಾಗಾಗಿ ಪ್ರವಾಸದ ವೇಳೆಯಲ್ಲಿ ಮಹಿಳೆಯರು ಮುಖ ತೊಳೆಯಬೇಕಾಗಿ ಬಂದರೂ ಕಣ್ಣಿನ ಅಲಂಕಾರಕ್ಕೆ ಧಕ್ಕೆಯಾಗುವುದಿಲ್ಲ.

ಮಾಹಿತಿಗೆ: 9972066555



## ಈಥೋಸ್‌ನಿಂದ ರೋಲೆಕ್ಸ್ ವಾಚ್

ಈಥೋಸ್ ಲಿಮಿಟೆಡ್ ಕಂಪೆನಿ ಇದೀಗ ಹೊಸ ಮಾದರಿಯ ರೋಲೆಕ್ಸ್ ವಾಚ್‌ಗಳನ್ನು ಮಾರುಕಟ್ಟೆಗೆ ತಂದಿದೆ. ವಿನ್ಯಾಸ ಆಕರ್ಷಕವಾಗಿದೆ, ಬಣ್ಣಗಳಲ್ಲಿ ವೈವಿಧ್ಯಗಳಿವೆ. 18 ಕ್ಯಾರೆಟ್ ಚಿನ್ನದ ಸ್ಟ್ರೈಪ್‌ಗಳಿದ್ದು ಇದರಲ್ಲೂ ಹಲವು ವೈವಿಧ್ಯಗಳಿವೆ. ಲೆದರ್ ಬೆಲ್ಟ್‌ನ ವಾಚ್ ಕೂಡ ಇದ್ದು ಉಡುಪಿಗೆ ಮ್ಯಾಚಿಂಗ್ ಮಾಡಿಕೊಳ್ಳಬಹುದು.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗಳಿಗೆ: 080–41219509/99801–88938/9739679402

## ಆಕರ್ಷಕ ಪ್ಲಾಟಿನಂ ಒಡವೆ



ಅತ್ಯಾಕರ್ಷಕ ವಿನ್ಯಾಸಗಳ ಪ್ಲಾಟಿನಂ ಒಡವೆಗಳನ್ನು ಟಿಬಿಝೆಡ್ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ನಿಸರ್ಗವನ್ನು ಪ್ರೇರಣೆಯಾಗಿಟ್ಟುಕೊಂಡು ತಯಾರಿಸಿರುವ ವಿವಿಧ ವಿನ್ಯಾಸಗಳ ಆಭರಣ ಆಧುನಿಕ ಮನೋಭಾವದ ಯುವಜನರನ್ನು ಸೆಳೆಯುವಂತಿದೆ. ಮ್ಯಾಟ್ ಫಿನಿಷಿಂಗ್ ಮತ್ತು ಹೈ ಪಾಲಿಷ್ ಮಾಡಿರುವ ಪೆಂಡೆಂಟ್, ರಿಂಗ್, ಕಿವಿಯೋಲೆ ಮುಂತಾದ ಒಡವೆಗಳ ಸಂಗ್ರಹ ಇದರಲ್ಲಿದೆ. ಬೆಲೆ 35 ಸಾವಿರ ರೂಪಾಯಿಗಳಿಂದ ಆರಂಭ.

ಮಾಹಿತಿಗೆ: http://www.tbztheoriginal.com



## ಓರಿಫ್ಲೇಮ್‌ನಿಂದ ಮಸ್ಕರಾ

ಸೌಂದರ್ಯ ಪ್ರಸಾದನಗಳಿಗೆ ಹೆಸರಾದ ಓರಿಫ್ಲೇಮ್ ಕಂಪೆನಿ ಇದೀಗ ಹೊಸದಾಗಿ ವ್ಯಾಲ್ಯೂಮ್ ಬಿಲ್ಡ್ ಮಸ್ಕರಾ ಹಾಗೂ ಜೆಲ್ ಐ ಲೈನರ್ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ. ಮಸ್ಕರಾದಲ್ಲಿರುವ ವ್ಯಾಲ್ಯೂಫ್ಲೆಕ್ಸ್ ಫಾರ್ಮುಲಾದಿಂದಾಗಿ ಹೆಚ್ಚು ಹೆಚ್ಚು ಲೇಯರ್‌ಗಳನ್ನು ಅಳವಡಿಸಿಕೊಳ್ಳಬಹುದು. ಮ್ಯಾಜಿಕಲ್ ಮೆಗಾ ಬ್ರಷ್‌ನಲ್ಲಿ ಲಾಂಗ್ ಮತ್ತು ಶಾರ್ಟ್ ರೋ ನೀಡಲಾಗಿದ್ದು, ಕಣ್ಣಿಗೆ ಗಾಢ ಲುಕ್ ಕೊಡುತ್ತದೆ. ಮಸ್ಕರಾ ಬೆಲೆ 429 ರೂಪಾಯಿ, ಐ ಲೈನರ್ ಬೆಲೆ 449 ರೂಪಾಯಿ.

ಓರಿಫ್ಲೇಮ್ ನೇರ ಮಾರಾಟ ಪ್ರತಿನಿಧಿಗಳಲ್ಲಿ ಲಭ್ಯ. ಮಾಹಿತಿಗೆ: 8971498865